ಬಗ್ಗೆ ಪ್ರಸ್ತಾಪ ಮಾಡಿದ್ದೆ. ಅಲ್ಲಿಗೆ ಕಾರ್ಪೊರೇಷನ್ ಬಂದ ದಿನವೇ ಬಹಳ ಅವ್ಯವಹಾರ ನಡೆದಂಥ ವಿಚಾರದಲ್ಲಿ ಈ ಸದನದಲ್ಲಿ ಚರ್ಚಿಸಲು ನಮಗೆ ತಾವು ಅವಕಾಶವನ್ನು ಕೊಟ್ಟಿದ್ದೀರಿ. ಶಿವಮೊಗ್ಗ ಜನತೆಯ ಹಣ ಕಾರ್ಪೊರೇಷನ್‌ನಲ್ಲಿ ಏನು ಪೋಲಾಗಿದೆ, ಅದನ್ನು ಸರಕಾರದ ಗಮನಕ್ಕೆ ತರಲು ಚರ್ಚೆಯಲ್ಲಿ ನಾನು ಪಾಲ್ಗೊಂಡು ಪ್ರಸ್ತಾಪ ಮಾಡಿದ್ದೆ. ಇದರ ಬಗ್ಗೆ ತನಿಖೆ ಮಾಡಲು ಸರಕಾರಕ್ಕೆ ಕೇಳಿಕೊಂಡ ವಿಚಾರ ಪತ್ರಿಕೆಗಳಲ್ಲಿ ಬಂದಾಗ, ಶಿವಮೊಗ್ಗ-ಭದ್ರಾವತಿ ಕಾರ್ಪೊರೇಷನ್‌ನ ಮಾಸಿಕ ಸಭೆಯಲ್ಲಿ ಈ ಶಾಸನ ಸಭೆಯಲ್ಲಿ ತಂದಂಥ ವಿಚಾರದ ಬಗ್ಗೆ ಒಂದು ಖಂಡನಾ ನಿರ್ಣಯವನ್ನು ಪಾಸ್ ಮಾಡಿದ್ದಾರೆ. ಹಾಗಾದರೆ ಕೋಟ್ಯಾಂತರ ರೂಪಾಯಿಗಳ ಅವ್ಯವಹಾರ ನಡೆದಿರುವಾಗ ಇಂಥ ವಿಚಾರದ ಪ್ರಸ್ತಾಪವನ್ನು ನಾವು ಶಾಸಕರಾಗಿ ಎಲ್ಲಿ ಮಾಡಲು ಸಾಧ್ಯವಾಗುತ್ತದೆ? ಅದರ ಬಗ್ಗೆ ಕ್ರಮ ತೆಗೆದುಕೊಳ್ಳಿ ಎಂದು ಹೇಳಿದರೆ ಕಾರ್ಪೊರೇಷನ್ ಸಭೆಯಲ್ಲಿ ನನ್ನ ಮೇಲೆ ಖಂಡನಾ ನಿರ್ಣಯವನ್ನು ಮಾಡುತ್ತಾರೆ. - ಈಶ್ವರಪ್ಪ ಆರೋಪಕ್ಕೆ ಪ್ರತಿಭಟನಾ ನಿರ್ಣಯ ಸ್ವೀಕಾರ. ಶಿವಮೊಗ್ಗ ಶಾಸಕ ಶ್ರೀ ಕೆ. ಎಸ್. ಈಶ್ವರಪ್ಪ ಅವರು ಇತ್ತೀಚೆಗೆ ವಿಧಾನ ಸಭೆ ಹಾಗೂ ಪತ್ರಿಕಾ ಗೋಷ್ಠಿಗಳಲ್ಲಿ ಶಿವಮೊಗ್ಗ-ಭದ್ರಾವತಿ ನಗರಪಾಲಿಕೆಯ ಮೇಯರ್ ಹಾಗೂ ಸದಸ್ಯರ ವಿರುದ್ಧ ಭ್ರಷ್ಟಾಚಾರದ ಕುರಿತು ಮಾಡಿದ ಆರೋಪಗಳನ್ನು ಖಂಡಿಸುವ ಮತ್ತು ಪ್ರತಿಭಟಿಸುವ ನಿರ್ಣಯವೊಂದನ್ನು ಶಿವಮೊಗ್ಗ-ಭದ್ರಾವತಿ ನಗರಪಾಲಿಕೆ ಕೈಗೊಂಡಿದೆ. ಇದನ್ನು ನೋಡಿದರೆ ನಮಗೆ ತುಂಬಾ ಆಶ್ಚರ್ಯವಾಗುತ್ತದೆ. ನಗರಪಾಲಿಕೆಯ ಮಾಸಿಕ ಸಭೆಯಲ್ಲಿ ಶ್ರೀ ಎಸ್. ಬಿ. ಕೇಶವಪ್ಪ ನಿರ್ಣಯವನ್ನು ಮಂಡಿಸಿದಾಗ ಅದಕ್ಕೆ ಉಳಿದವರು ಪೂರ್ಣ ಬೆಂಬಲ ವ್ಯಕ್ತ ಪಡಿಸಿದರು. ಅಧ್ಯಕ್ಷತೆ ವಹಿಸಿದ್ದ ಮೇಯರ್ ಶ್ರೀ ಮಲ್ಲಿಕಾರ್ಜುನರವರು ಶಾಸಕರಿಗೆ ಈ ಸಭೆಯಲ್ಲಿ ಹಾಜರಾಗಲು ಅವಕಾಶವಿದ್ದರೂ ಹಾಜರಾಗಿ ಅಭಿವೃದ್ಧಿಕಾರ್ಯಗಳಲ್ಲಿ ಪಾಲ್ಗೊಳ್ಳದೆ, ಕೇವಲ ರಾಜಕೀಯಕ್ಕಾಗಿ ಶಾಸನ ಸಭೆಯಲ್ಲಿ ಆರೋಪ ಮಾಡುವುದನ್ನು ನಗರಪಾಲಿಕೆಯು ಖಂಡಿಸುತ್ತದೆ ಎಂದರು. ಸದಸ್ಯ ಶ್ರೀ ಹೊನ್ನಪ್ಪನವರು ಶಾಸಕರು ಸುಳ್ಳು ಆರೋಪವನ್ನು ಮಾಡುವುದನ್ನು ಬಿಟ್ಟು ಅಭಿವೃದ್ಧಿ ಕೆಲಸಗಳನ್ನು ಮಾಡಲಿ ಎಂದು ನಿರ್ಣಯವನ್ನು ಕೈಗೊಂಡಿದ್ದಾರೆಂದು ಪತ್ರಿಕೆಗಳಲ್ಲಿ ಬಂದಿದೆ. ಆದ್ದರಿಂದ ಮಾನ್ಯ ಅಧ್ಯಕ್ಷರೇ, ಈ ಒಂದು ವಿಚಾರವನ್ನು ತಾವುಗಳು ಹಕ್ಕುಬಾಧ್ಯತಾ ಸಮಿತಿಗೆ ಒಪ್ಪಿಸಿ, ಯಾರ್ಯಾರು ಈ ನಿರ್ಣಯದಲ್ಲಿ ಪಾಲ್ಗೊಂಡಿದ್ದಾರೆ, ಅವರುಗಳನ್ನು ಕರೆಸಿ ಛೀಮಾರಿ ಹಾಕಬೇಕೆಂದು ನಾನು ಕೇಳಿಕೊಂಡು ನನ್ನ ರಕ್ಷಣೆಗೆ ಮಾನ್ಯ ಸಭಾಧ್ಯಕ್ಷರು ಬರಬೇಕೆಂದು ಈ ಸಂದರ್ಭದಲ್ಲಿ ತಿಳಿಸುತ್ತಾ, ಶಿವಮೊಗ್ಗ-ಭದ್ರಾವತಿ ಕಾರ್ಪೊರೇಷನ್‌ನಲ್ಲಿಅವ್ಯವಹಾರಗಳು ಆಗುತ್ತಿದ್ದರೆ, ಕ್ಷೇತ್ರದ ಶಾಸಕನಾಗಿ ನನಗೆ ಇಲ್ಲಿ ಪ್ರಸ್ತಾಪ ಮಾಡಲು ಹಕ್ಕು ಇಲ್ಲವೆ? ಇದು ಅಪರಾಧವೆ? ನನಗೆ ಈ ಸದನದಲ್ಲಿ ರಕ್ಷಣೆ ಇಲ್ಲವಾದಲ್ಲಿ ನಾನು ಮುಂದೆ ಮಾತನಾಡಲು ಆಗಲಾರದು. ಮಾನ್ಯ ಮುಖ್ಯಮಂತ್ರಿಗಳಿಗೆ ಅಲ್ಲಿ ಏನು ನಡೆಯುತ್ತಿದೆ ಎಂಬುದು ಗೊತ್ತಿದೆ. ಅಲ್ಲಿ ಸಾಕಷ್ಟು ಹಗರಣಗಳು ಇವೆ. ಅಲ್ಲಿಯ ಕಾಂಟೆಸ್ಸಾ ಕಾರು ಎಲ್ಲಿದೆ ಎಂದು ಗೊತ್ತಿಲ್ಲ. ಎರಡು ಎಕರೆ ಜಮೀನನ್ನು ಖಾತೆ ಬದಲಾವಣೆ ಮಾಡಲು ಹೋಗಿ ಅದು ಮೂರು ಕಾಲು ಎಕರೆಯಾಗಿ, ಅಲ್ಲಿ ಕೋಟ್ಯಾಂತರ ರೂಪಾಯಿಗಳ ಅವ್ಯವಹಾರವಾಗಿದೆ. ಹೀಗೆ ಅವ್ಯವಹಾರ ಮಾಡುವ ಕಾರ್ಪೊರೇಷನ್‌ನನ್ನು ವಜಾ ಮಾಡಿ ಚುನಾವಣೆ ನಡೆಸಿ ಎಂದು ನಾನು ಹೇಳಿದ್ದೆ. ಆದರೆ ಸರಕಾರದವರು ಆ ಬಗ್ಗೆ ಗಮನಕೊಟ್ಟಿಲ್ಲ. ಹಾಗೆಯೇ ನನಗೆ ಇಲ್ಲಿ ಕೂಡ ಪ್ರಸ್ತಾಪ ಮಾಡಲು ಅಡ್ಡಿಯಾದರೆ,

ಸರಕಾರ ಇದರ ಬಗ್ಗೆ ಯಾವ ಕ್ರಮ ತೆಗೆದುಕೊಂಡಿದೆ ಎಂದು ತಿಳಿಸಬೇಕಾಗುತ್ತದೆ. ಆದ್ದರಿಂದ ನನಗೆ ರಕ್ಷಣೆ ಕೊಡಬೇಕು ಮತ್ತು ಯಾರು ಅವ್ಯವಹಾರ ಮಾಡಿದ್ದಾರೋ ಹಾಗೂ ಖಂಡನಾ ನಿರ್ಣಯವನ್ನು ತಂದಿದ್ದಾರೋ ಅವರ ಬಗ್ಗೆ ಛೀಮಾರಿ ಹಾಕಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಈ ವಿಚಾರವನ್ನು ಹಕ್ಕುಚ್ಯುತಿ ಸಮಿತಿಗೆ ಒಪ್ಪಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹಕ್ಕುಚ್ಯುತಿಯಾಗಿರುವ ಬಗ್ಗೆ ಏನು ವಿವರವನ್ನು ಕೊಟ್ಟಿದ್ದಾರೆ, ಇದು ಗಂಭೀರವಾದಂಥ ವಿಚಾರವಾಗಿದೆ. ಮಾನ್ಯ ಮುಖ್ಯಮಂತ್ರಿಯವರು ಇದರ ಬಗ್ಗೆ ಹೇಳಿಕೆಕೊಡಬೇಕು. ಇಲ್ಲವಾದರೆ ಶಾಸಕರಾಗಿ ನಾವು ಕೆಲಸ ಮಾಡುವುದು ಕಷ್ಟವಾಗುತ್ತದೆ.

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಮಾನ್ಯ ಈಶ್ವರಪ್ಪನವರು ಎತ್ತಿದಂಥ ಹಕ್ಕುಚ್ಯುತಿ ಸೂಚನೆ ಬಗ್ಗೆ ನಿರ್ಣಯ ತೆಗೆದುಕೊಳ್ಳಬೇಕಾದುದು ತಮಗೆ ಬಿಟ್ಟ ವಿಚಾರ. ಅದು ಸರಕಾರ ಮಾಡತಕ್ಕಂಥ ಕೆಲಸವಲ್ಲ. ನಗರಪಾಲಿಕೆಯವರು ಅವರವರ ಮಿತಿಯಲ್ಲಿ ನಡೆಯಬೇಕಾಗುತ್ತದೆ. ಹಾಗೆ ಅವರ ಮಿತಿಯಲ್ಲಿ ಅವರು ನಡೆಯದಿದ್ದರೆ ನಮ್ಮ ಪೌರಾಡಳಿತ ಇಲಾಖೆ ಇದೆ, ಅವರು ಅದರ ನಿರ್ಣಯವನ್ನು ತರಿಸಿ, ನಮ್ಮ ಮಿತಿಯಲ್ಲಿ ಏನು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೋ ಆ ಕಾರ್ಯಕ್ರಮವನ್ನು ತೆಗೆದುಕೊಳ್ಳಲು ನಾವು ಅಂಜುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಈ ಸದನದಲ್ಲಿ ನಡೆದಂಥ ಚರ್ಚೆಯ ಬಗ್ಗೆ ಅವರು ನಿರ್ಣಯ ಮಾಡುವುದಾದರೆ, ನಿರ್ಣಯ ಮಾಡಿ ವಿರೋಧ ಮಾಡುವುದಾದರೆ ಇದಕ್ಕಿಂತ ಮೇಲ್ಪಟ್ಟ ಸಭೆಯೋ ಅವರದ್ದು? ಆದ್ದರಿಂದ ಕೂಡಲೇ ಅದನ್ನು ತಾವು ರದ್ದು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ (ವಿರೋಧಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ಹಕ್ಕುಚ್ಯುತಿಯ ಬಗ್ಗೆ ನಿರ್ಣಯವನ್ನು ಮಾಡತಕ್ಕಂಥವರು ತಾವು ಎಂಬುದು ಸರಿಯಾಗಿದೆ. ಈಶ್ವರಪ್ಪನವರು ಶಾಸಕರಾಗಿ ಅಲ್ಲಿ ಏನು ದುರ್ವ್ಯವಹಾರ ನಡೆಯುತ್ತಿದೆ, ಅದನ್ನು ಇಲ್ಲಿ ಹೇಳಿದ್ದಾರೆ, ಹಾಗೆಯೇ ರಾಜ್ಯಪಾಲರಿಗೂ ದೂರು ಕೊಟ್ಟಿದ್ದಾರೆ. ಅದರ ಬಗ್ಗೆ ಗೌವರ್ನರ್‌ರವರು ಕೂಡ ಆದೇಶ ಮಾಡಿದ್ದಾರೆ. ಆದ್ದರಿಂದ ಶಿವಮೊಗ್ಗ ನಗರಪಾಲಿಕೆಯಲ್ಲಿ ದುರ್ವ್ಯವಹಾರ ಏನು ನಡೆಯುತ್ತಿದೆ, ಅದರ ಬಗ್ಗೆ ಒಂದು ತನಿಖೆಯನ್ನು ಮಾಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿ. ಭೈರೇಗೌಡ : ಮಾನ್ಯ ಅಧ್ಯಕ್ಷರೇ, ಅಲ್ಲಿರತಕ್ಕಂಥ ಸದಸ್ಯರು ಚುನಾಯಿತ ಸದಸ್ಯರಲ್ಲ. ಅಲ್ಲಿರುವವರು ಸರಕಾರದ ಕೃಪಾಕಟಾಕ್ಷದಿಂದ ಕುಳಿತಿರತಕ್ಕಂಥ ಸದಸ್ಯರಾಗಿದ್ದಾರೆ. ಅವರು ಜನರಿಂದ ಚುನಾಯಿಸಲ್ಪಟ್ಟವರಲ್ಲ. ಮೇಯರ್ ಕೂಡ ನಾಮಕರಣವಾಗಿರತಕ್ಕಂಥವರು. ಬಹುಶಃ ಪ್ರಪಂಚದಲ್ಲಿಯೇ ಮಹಾನಗರಪಾಲಿಕೆಗೆ ನಾಮಕರಣ ವ್ಯವಸ್ಥೆಯು ಎಲ್ಲಿಯೂ ಆದ ಹಾಗೆ ಇಲ್ಲ. ಆದರೇ ನೀವು ಶಿವಮೊಗ್ಗದಲ್ಲಿ ಒಂದು ಹೊಸ ಕ್ರಮವನ್ನು ಸ್ಥಾಪನೆ ಮಾಡಿದ್ದೀರಿ. ಇಂಥ ಜನಗಳನ್ನು

ನೀವು ಏಕೆ ಇಟ್ಟುಕೊಂಡಿದ್ದೀರಿ. ಶಾಸಕರಾಗಿ ಇಲ್ಲಿ ಪ್ರಸ್ತಾಪ ಮಾಡುವುದು ಅವರಿಗೆ ಅಪರಾಧವಾಗುವುದಾದರೆ ನಾವು ಹೇಗೆ ಕೆಲಸ ಮಾಡುವುದು? ನಮ್ಮನ್ನು ಜನರು ಕಳುಹಿಸಿರುವುದು ಕೂಡ ಇಂಥ ವಿಚಾರಗಳನ್ನು ಪ್ರಸ್ತಾಪ ಮಾಡಲಿಕ್ಕಾಗಿಯೇ ಎಂಬುದು ಅವರಿಗೆ ಗೊತ್ತಿಲ್ಲವೇ? ನಾವು ಇಲ್ಲಿ ಮಾತನಾಡಿದ ವಿಚಾರಗಳ ಬಗ್ಗೆ ಉದ್ದಟತನವನ್ನು ತೋರಿಸಿ ಮಾತನಾಡಿದವರ ಮೇಲೆ ಅವರು ಖಂಡನಾ ನಿರ್ಣಯವನ್ನು ಪಾಸ್ ಮಾಡುವುದಾದರೆ ನಾವು ಇಲ್ಲಿ ಕುಳಿತುಕೊಂಡು ಕೆಲಸ ಮಾಡುವುದೇ ಕಷ್ಟವಾಗುತ್ತದೆ. ಆದ್ದರಿಂದ ಖಂಡನಾ ನಿರ್ಣಯವನ್ನು ತರುವುದಕ್ಕೆ ಅವರಿಗೆ ಹಕ್ಕಿಲ್ಲ. ಹಕ್ಕಿಲ್ಲದೆ ಇರುವಂಥ ಹಕ್ಕನ್ನು ಚಲಾಯಿಸತಕ್ಕಂಥ ಪ್ರಯತ್ನವನ್ನು ಇವತ್ತು ನಡೆಸಿದ್ದಾರೆ. ಆದ್ದರಿಂದ ಆ ಕಾರ್ಪೊರೇಷನ್‌ನನ್ನು ರದ್ದು ಮಾಡಬೇಕಾದ ಅವಶ್ಯಕತೆ ಇದೆ. ನೀವು ಉತ್ತರವನ್ನು ಕೊಡುವಂತಹ ಸಂದರ್ಭದಲ್ಲಿಆ ಕಾರ್ಪೊರೇಷನನ್ನು ರದ್ದು ಮಾಡಿದ್ದೇವೆ ಎನ್ನತಕ್ಕದ್ದನ್ನು ಹೇಳಬೇಕೆಂದು ನಾನು ತಮ್ಮಲ್ಲಿ ವಿನಂತಿಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮೇಯರ್ ಮತ್ತು ಸದಸ್ಯರು ಇಬ್ಬರು ನಾಮಕರಣವಾದಂತಹವರು. ಅವರು ಚುನಾವಣೆಯಲ್ಲಿ ಗೆದ್ದವರು ಅಲ್ಲ. ಸರ್ಕಾರದವರಿಗೆ ಬೇಕಾದವರನ್ನು ಮೇಯರ್ ಮಾಡುವುದು, ಕಷ್ಟ ಬಂದವರನ್ನು ನಾಮಕರಣ ಮಾಡುವುದು ಸರಿಯಲ್ಲ. ಇದು ಪ್ರಜಾಪ್ರಭುತ್ವದ ವಿರೋಧ ನೀತಿ, ಸರ್ಕಾರ ಇದರ ಬಗ್ಗೆ ಕೂಡಲೇ ಕ್ರಮ ತೆಗೆದುಕೊಳ್ಳಬೇಕೆಂದು ನಾವು ಮಾನ್ಯ ಮುಖ್ಯಮಂತ್ರಿಗಳಲ್ಲಿ ಪ್ರಾರ್ಥನೆಯನ್ನು ಮಾಡುತ್ತೇವೆ, ಈ ಮಹಾನಗರಪಾಲಿಕೆ ಸರ್ಕಾರದ ಕೃಪಾರ್ಥದಿಂದ ಬಂದಂಥದ್ದು. ಈ ಸದಸ್ಯರು ನಾಮಕರಣವಾದಂತಹ ಸದಸ್ಯರು. ಇಲ್ಲಿರತಕ್ಕಂಥ ಮೇಯರ್ ನಾಮಕರಣವಾದಂತಹವರು. ಇಂಥಾದ್ದು ಇತಿಹಾಸದಲ್ಲಿ ಹಾಗೂ ಚರಿತ್ರೆಯಲ್ಲಿ ಎಂದೂ ನಡೆದಿಲ್ಲ. ಆದ್ದರಿಂದ, ಈ ಕೂಡಲೇ ಅದನ್ನು ವಜಾ ಮಾಡಿ, ಅವರು ಈ ಸದನಕ್ಕೆ ಅಗೌರವ ಮತ್ತು ಅಪಚಾರವನ್ನು ಮಾಡಿದ್ದಾರೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಶಿವಮೊಗ್ಗ, ಭದ್ರಾವತಿ ಕಾರ್ಪೊರೇಷನ್ ರಚನೆಯಾದ ವಿಚಾರದಲ್ಲಿ ಹೈಕೋರ್ಟ್‌ನಲ್ಲಿ ಒಂದು ಮೊಕದ್ದಮೆ ನಡೆಯುತ್ತಿದೆ. ಆ ಮೊಕದ್ದಮೆ ಏನು ಎಂದರೆ ಈ ಕಾರ್ಪೊರೇಷನ್ ಅನ್ನು ರಚನೆ ಮಾಡಿರುವುದೇ ತಪ್ಪು ಎಂದು. ಅದರ ಬಗ್ಗೆ ಆಧ್ಯಾದೇಶ ಇತ್ತು; ತಮಗೆ ಗೊತ್ತಿರಬೇಕು, ಸರ್ಕಾರದಲ್ಲಿ ಅದಕ್ಕೆ ಸಂಬಂಧಪಟ್ಟ ಪಂಚಾಯತಿಗಳವರನ್ನು ಕನ್‌ಸಲ್ಟ್ ಮಾಡಿ ತೀರ್ಮಾನ ಮಾಡಬೇಕೆಂದು ಇತ್ತು ; ಆದರೆ ಕನ್‌ಸಲ್ಟ್ ಮಾಡಬೇಕಾಗಿಲ್ಲ ಎಂಬ ಒಂದು ಆಧ್ಯಾದೇಶ ಇತ್ತು. ಆ ಆಧ್ಯಾದೇಶ ಲ್ಯಾಪ್ಸ್ ಆಗಿದೆ. ಕೋರ್ಟಿನ ಮುಂದೆ ಇರುವುದು ಬಗೆಹರಿದರೆ ಮುಂದೆ ಸರ್ಕಾರಕ್ಕೆ ಕ್ರಮ ತೆಗೆದುಕೊಳ್ಳುವುದಕ್ಕೆ ಅವಕಾಶವಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ನ್ಯಾಯಾಲಯದಲ್ಲಿರುವುದನ್ನು ನಾವು ಪ್ರಶ್ನೆ ಮಾಡುತ್ತಿಲ್ಲ. ಅಲ್ಲಿ ಒಂದು ಲೂಟಿ ನಡೆದಿದೆ. ಆ ಬಗ್ಗೆ ವಿಚಾರಣೆಯನ್ನು ಮಾಡಿ ಎಂದು ಹೇಳಿದರೆ ನೀವು ವಿಚಾರಣೆಯನ್ನು ಮಾಡುವುದಿಲ್ಲ. ಸರ್ಕಾರದ ನೀತಿ ಏನು? ಮೇಯರ್‌ರವರನ್ನು ನಾಮಕರಣ ಮಾಡತಕ್ಕಂಥ ನೀತಿ ಇದೆಯೇ? ಮೇಯರ್‌ನ್ನು ನಾಮಕರಣ ಮಾಡತಕ್ಕಂಥ ನೀತಿ ಇದೆಯೇ? ಮೇಯರ್‌ನ್ನು ನಾಮಕರಣ

ಮಾಡತಕ್ಕಂಥ ನೀತಿ ಎಲ್ಲಿದೆ. ಇದು ಸರಿಯಲ್ಲ. ಸರ್ಕಾರ ಇದನ್ನು ಕೂಡಲೇ ವಜಾ ಮಾಡುತ್ತೇವೆಂದು ಹೇಳಬೇಕು. ಇಲ್ಲದಿದ್ದರೆ ನಾವು ಈ ಬಗ್ಗೆ ತೀವ್ರವಾಗಿ ಪ್ರತಿಭಟನೆ ಮಾಡುತ್ತೇವೆ.

ಶ್ರೀ ಅಂಜನಾಮೂರ್ತಿ (ಉಪಾಧ್ಯಕ್ಷರು) ಸಭೆಯ ಪೀಠವನ್ನು ಆಲಂಕರಿಸಿದರು.

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೇ, ಮಾನ್ಯ ಈಶ್ವರಪ್ಪನವರು ಹೇಳಿದ ಹಾಗೆ ಕಾಂಟೇಸಾ ಕಾರನ್ನು ಶಿವಮೊಗ್ಗ ಭದ್ರಾವತಿ ಕಾರ್ಪೊರೇಷನ್ ಕಾರ್ಯವ್ಯಾಪ್ತಿಯಿಂದಾಚೆಗೆ ತೆಗೆದುಕೊಂಡು ಹೋಗಿ ಸಂಪೂರ್ಣವಾಗಿ ಜಜ್ಜಿ ಹಾಕಲಾಗಿದೆ. ಈ ವಿಷಯ ಕಾರ್ಪೊರೇಷನ್ ಮೇಯರ್‌ಗೂ ಮತ್ತು ಕಾರ್ಪೊರೇಷನ್ ಕಮಿಷನರ್‌ರಿಗೇ ತಿಳಿಸಲಿಲ್ಲ. ಯಾವುದೇ ತರದ ಪರವಾನಿಗಿಯನ್ನು ತೆಗೆದುಕೊಳ್ಳದೆ ಅದನ್ನು ಬೆಂಗಳೂರಿನ ಕಂಪನಿ ಒಂದರಲ್ಲಿ ಬಿಟ್ಟಿದ್ದಾರೆ. ಅದರ ಬಗ್ಗೆ ನಾನು ಶಿವಮೊಗ್ಗಕ್ಕೆ ಹೋಗಿದ್ದಾಗ, ಕಮಿಷನರ್‌ರವರ ಹತ್ತಿರ ಮಾತನಾಡಿ ಅದರ ರಿಪೋರ್ಟನ್ನು ತರಿಸಿಕೊಂಡು ಅದರ ಎನ್‌ಕ್ವೈರಿಯನ್ನು ಮಾಡಿಸಿ ಷೋಕಾಸ್ ನೋಟೀಸನ್ನು ಕೂಡ ಇಷ್ಯೂ ಮಾಡಿದ್ದೇನೆ. ಇನ್ನು ಇತರೆ ಅನೇಕ ಸಮಸ್ಯೆಗಳ ಬಗ್ಗೆ ಈಗಾಗಲೇ ತನಿಖೆ ಮಾಡಿಸುತ್ತಿದ್ದೇನೆ. ನಾವು ಸುಮ್ಮನೆ ಕುಳಿತುಕೊಂಡಿಲ್ಲವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ವಾಟಾಳ ನಾಗರಾಜ್ : ಆ ಕಾರು ಎಲ್ಲಿತ್ತು?

ಉಪಾಧ್ಯಕ್ಷರು : ಸಚಿವರು ಏನು ಹೇಳುತ್ತಾರೋ ಅದನ್ನು ಕೇಳಿ; ಅವರು ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ.

ಶ್ರೀ ಚೌಡರೆಡ್ಡಿ : ಈಗಾಗಲೇ ಅಲ್ಲಿನ ಸದಸ್ಯರು ಕೂಡ ದೂರನ್ನು ಕೊಟ್ಟಿದ್ದಾರೆ. ಬೇರೆಯವರೂ ಕೂಡ ಕೊಟ್ಟಿದ್ದಾರೆ. ಅದರ ಬಗ್ಗೆ ತನಿಖೆ ಮಾಡಿ ತುರ್ತಾಗಿ ರಿಪೋರ್ಟನ್ನು ಕೊಡಬೇಕೆಂದು ಈಗಾಗಲೇ ಆಜ್ಞೆಯನ್ನು ಮಾಡಿದ್ದೇನೆ. ಬೇಕಾದರೆ ಎಲ್ಲಾ ಡಿಟೈಲ್ಸ್‌ನ್ನು ತಂದು ಕೊಡುತ್ತೇನೆ. ಯಾರನ್ನು ಉಳಿಸಬೇಕು, ಅಥವಾ ಮಾಡಬಾರದ ಕೆಲಸವನ್ನು ಮಾಡಿಸಬೇಕೆಂದು ನಮಗೆ ಕಾಳಜಿ ಇಲ್ಲ. ನಿಮ್ಮ ವಿರುದ್ಧ ನಿರ್ಣಯ ಮಾಡಿದ್ದಾರೆ ಅಂತ ಹೇಳಿದ್ದೀರಿ, ಅದನ್ನು ನಾನು ತರಿಸಿಕೊಳ್ಳುತ್ತೇನೆ. ನಮಗೆ ಅದನ್ನು ರದ್ದು ಮಾಡುವುದಕ್ಕೆ ಅವಕಾಶ ಇದೆ. ಇನ್ನು ಹಕ್ಕುಚ್ಯುತಿಯ ಬಗ್ಗೆ ನಮ್ಮ ರಾಮಸ್ವಾಮಿಯವರು ಹೇಳುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಆ ನಗರಪಾಲಿಕೆಯ ಪಾಲಿಕೆಯ ಬಗ್ಗೆ ನಿಮಗೆ ಇರತಕ್ಕ ವ್ಯಾಮೋಹ ಏನು? ಸರ್ಕಾರಕ್ಕೆ ಇರತಕ್ಕ ಪ್ರೀತಿ ಏನು? ವಿಶ್ವಾಸ ಏನು? ಒಂದು ನಗರ ಮಹಾಪಾಲಿಕೆ ಇಷ್ಟೊಂದು ಭ್ರಷ್ಟಾಚಾರ ಮಾಡಿದೆ, ಈ ನಮ್ಮ ಸದಸ್ಯರ ಮೇಲೆ ಆರೋಪಣೆಯನ್ನು ಮಾಡಿದ್ದಾರೆ, ಮತ್ತು ಮಂತ್ರಿಗಳು ಹೇಳಿದ ಪ್ರಕಾರ ಮೇಯರ್‌ರವರ ಕಾರು ಹೊರಗಡೆ ಹೋಗಿ ಅಲ್ಲಿ ಅಪಘಾತಕ್ಕೆ ಈಡಾಗಿದೆ. ಆ ಕಾರನ್ನು ಬೇರೆ ಕಡೆಗೆ ಸೇರಿಸಿದ್ದಾರೆಂದರೆ, ಆ ಕಾರಿನಲ್ಲಿ ಇದ್ದವರು ಯಾರು? ಕಾರು

ಎಲ್ಲಿಗೆ ಹೋಗಿತ್ತು, ಏತಕ್ಕೆ ಕಾರನ್ನು ತೆಗೆದುಕೊಂಡು ಹೋಗಿದ್ದರು ಇವೆಲ್ಲಾ ಒಂದರಿಂದ ಒಂದು ಸಂಶಯಕ್ಕೆ ಎಡೆಮಾಡಿಕೊಡುತ್ತದೆ. ಆದ್ದರಿಂದ ಈ ಕೂಡಲೇ ನೀವು ಅದನ್ನು ಕಾನೂನು ಪ್ರಕಾರ ವಜಾ ಮಾಡಬಹುದು. ಏತಕ್ಕೆ ನೀವು ವಜಾ ಮಾಡುವುದಕ್ಕಾಗುವುದಿಲ್ಲ. ಸರ್ಕಾರದಿಂದ ನಿಮಗೆ ವಜಾ ಮಾಡಬಾರದೆಂದು ಸೂಚನೆ ಬಂದಿದೆಯೇ? ಉಚ್ಚನ್ಯಾಯಾಲಯದಿಂದ ಸರ್ಕಾರಕ್ಕೆ ಏನಾದರೂ ಈ ಮಹಾನಗರ ಪಾಲಿಕೆಯನ್ನು ರದ್ದುಮಾಡಬಾರದೆಂದು ತಡೆಯಾಜ್ಞೆ ಬಂದಿದೆಯೇ? ಅದನ್ನು ತಿಳಿಸಿ, ಇದು ಸರಿಯಲ್ಲ. ನೀವು ಆ ರೀತಿ ಹೇಳುವುದಾದರೆ ನಿಮ್ಮ ನೀತಿಗೆ ನಾವು ಒಪ್ಪುವುದಿಲ್ಲ. ದಯಮಾಡಿ ಸ್ಪಷ್ಟಪಡಿಸಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ : ಕಾನೂನಿನಂತೆ ಆವತ್ತು ಯಾರೂ ಪ್ರತಿನಿಧಿಯಾಗಿ ಆಯ್ಕೆಯಾಗಿ ಬಂದಿದ್ದರು. ಅವರನ್ನು ಕಾರ್ಪೋರೇಷನ್ ಆದಮೇಲೆ ನೇಮಕ ಮಾಡಬೇಕಾಗಿತ್ತು. ಕಳೆದ ಶತಮಾನದ ಯಾವುದೇ ಇತಿಹಾಸವನ್ನು ತೆಗೆಯಿರಿ, ಕರ್ನಾಟಕ ರಾಜ್ಯದಲ್ಲಿ ಎಂದೂ ಸಹ ಈ ರೀತಿ ಇದ್ದಕಿದ್ದ ಹಾಗೆ ಚುನಾಯಿತ ನಗರಸಭೆಯನ್ನು ರದ್ದುಮಾಡಿ ಕಾರ್ಪೋರೇಷನ್ ಎಂದು ಮಾಡಿ ಕೆಲವರನ್ನು ನಾಮಿನೇಟ್ ಮಾಡುವಂತದ್ದು ನಡೆದಿಲ್ಲ. ಅಲ್ಲಿ ಅವ್ಯವಹಾರಗಳು ನಡೆದಿರುವುದು ತಮ್ಮ ಗಮನಕ್ಕೂ ಬಂದಿದೆ. ಅದು ನೂರಾರು ಇವೆ, ನಾನು ಹೇಳುವಂತಹ ಅಗತ್ಯವಿಲ್ಲ. ಇದು ಹಿರಿಯರಾದಂತಹ ಎಲ್ಲಾ ಸಚಿವರಿಗೂ ಗೊತ್ತಿರುವಂತಹದ್ದು. ನಾನು ಈ ಸಂದರ್ಭದಲ್ಲಿ ತಮ್ಮಲ್ಲಿ ವಿನಂತಿಮಾಡಿಕೊಳ್ಳುವುದೇನೆಂದರೆ, ಮಾನವೇಷವನ್ನು ಮಾಡದೆ ಇದರ ಬಗ್ಗೆ ಸರಿಯಾದಂತಹ ಕ್ರಮ ತೆಗೆದುಕೊಳ್ಳಬೇಕು. ಹಕ್ಕುಚ್ಯುತಿಯ ಬಗ್ಗೆ ಮಾನ್ಯ ಅಧ್ಯಕ್ಷರಿಗೆ ಬಿಟ್ಟಿದ್ದು, ಅವರ ಏನು ತೀರ್ಮಾನ ಬೇಕಾದರೂ ತೆಗೆದುಕೊಳ್ಳಲಿ, ಅದಕ್ಕೆ ನಾವು ತಲೆಬಾಗುತ್ತೇವೆ. ಆದರೆ ಇವತ್ತು ಏನು ಅವ್ಯವಹಾರದ ಮೇಲೆ ಅವ್ಯವಹಾರ ಅಲ್ಲಿ ನಡೆಯುತ್ತಿದೆ, ಅದರಿಂದಾಗಿ ಶಿವಮೊಗ್ಗ ರಸ್ತೆಯಲ್ಲಿ ಓಡಾಡುವಂತಹ ಸ್ಥಿತಿಯಲ್ಲಿ ಇಲ್ಲ. , ಇವತ್ತೆ ಈ ಸದನದಲ್ಲೇ ತಾವು ಘೋಷಣೆಯನ್ನು ಮಾಡಿ ಅದನ್ನು ರದ್ದು ಮಾಡಿದರೆ ನಿಮ್ಮ ಸರ್ಕಾರಕ್ಕೆ ಗೌರವ ಬರುತ್ತದೆ. ಬೇಕಾದಂತಹ ಅಡ್ಮಿನಿಸ್ಟ್ರೇಟರ್‌ನ್ನು ನೇಮಕ ಮಾಡಿಕೊಳ್ಳಿ. ಆಮೇಲೆ ಚುನಾವಣೆಯನ್ನು ಮಾಡಿ, ತಮಗೆ ಅನುಕೂಲವಾದಾಗ ಚುನಾವಣೆಯನ್ನು ಮಾಡಿ; ನಮ್ಮದೇನೂ ಒತ್ತಾಯವಿಲ್ಲ, ಆದರೆ ಈ ಅಪಮಾನವನ್ನು ಸಹಿಸಿಕೊಳ್ಳುವುದು ಬೇಡ; ಇದು ಎಲ್ಲರಿಗೂ ಸಂಬಂಧಪಟ್ಟಂತಹ ವಿಷಯವಾಗಿದೆ. ಇದರ ಬಗ್ಗೆ ಪೌರಾಡಳಿತ ಸಚಿವರು ಹೇಳಬೇಕು.

ಶ್ರೀ ವಾಟಾಳ್ ನಾಗರಾಜ್ : ನಾವು ತಮಗೆ ಎಷ್ಟು ಹೇಳಿದರೂ ಈ ಸರ್ಕಾರದ ತಲೆಗೆ ಹೋಗುತ್ತಿಲ್ಲ. ನೀವು ಯಾರನ್ನು ರಕ್ಷಣೆಯನ್ನು ಮಾಡುವುದಕ್ಕೆ ಹೊರಟಿದ್ದೀರಿ ಎಂದು ನಾನು ನೇರವಾಗಿ ಕೇಳುತ್ತಿದ್ದೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಯಾರನ್ನೂ ರಕ್ಷಣೆ ಮಾಡುವುದಕ್ಕೆ ಸರ್ಕಾರ ಹೋಗುತ್ತಿಲ್ಲ. ಎಲ್ಲಾ ಕಾನೂನು ಪ್ರಕಾರವೇ ನಡೆಯುವುದಕ್ಕೆ ಏನು ಬೇಕೋ ಅದನ್ನು ಮಾಡುತ್ತೇವೆ. ಈ ಸದನದಲ್ಲಿ ಮಾನ್ಯ ಸದಸ್ಯರಿಗೆ ಹೇಳತಕ್ಕಂಥ ಹಕ್ಕು ಪೂರ್ತಿ ಇದೆ. ಇದರ ಮೇಲೆ ಬೇರೆಯವರು ಟೀಕೆ ಮಾಡುವ ಹಾಗಿಲ್ಲ. "ಅವರು ಹೇಳಿದ್ದು ಸರಿಯಲ್ಲ ಅಂತ ಹೇಳಬಹುದೇ ವಿನಃ ಕೇಳುವ ಹಕ್ಕಿಲ್ಲ, ಇದು ಒಂದು ಸ್ಪ್ಯಾಚುಟರಿ ಬಾಡಿ

ಪುರಸಭೆ ಅಥವಾ ಕಾರ್ಪೊರೇಷನ್ ಸ್ಟ್ಯಾಚುಟರಿ ಬಾಡಿಗಳು. ಈ ವಿಷಯದಲ್ಲಿ, ಹಕ್ಕುಚ್ಯುತಿ ಆಗಿದೆಯೇ ಇಲ್ಲವೇ ಎನ್ನುವ ತೀರ್ಮಾನವನ್ನು ಮಾನ್ಯ ಅಧ್ಯಕ್ಷರಿಗೆ ಬಿಟ್ಟುಬಿಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಅದನ್ನು ವಜಾ ಮಾಡಬೇಕೆಂದು ಹೇಳಿ ನಾವು ಧರಣ ಮಾಡುತ್ತಿದ್ದೇವೆ. ಸರ್ಕಾರ ಅದನ್ನು ವಜಾ ಮಾಡಬೇಕು, ಅದು ಸರಿಯಲ್ಲ, ಭ್ರಷ್ಟಾಚಾರದಿಂದ ನಡೆಯತಕ್ಕಂಥ ಈ ಸಂಸ್ಥೆ ಮುಂದುವರೆಯುವುದು ಸರಿಯಲ್ಲ.

(ಗೊಂದಲ)

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಮಾನ್ಯ ಸದಸ್ಯರೇ ಕಾರ್ಪೊರೇಷನ್ ವಜಾ ಮಾಡುವುದು ಕೋರ್ಟಿನಲ್ಲಿದೆ. ಕೋರ್ಟಿನಲ್ಲಿ ತೀರ್ಮಾನವಾಗಬೇಕು.

(ಗೊಂದಲ)

ಶ್ರೀ ಕೆ. ಎಸ್. ಈಶ್ವರಪ್ಪ : ಕೋರ್ಟಿನಲ್ಲಿ ನಡೆಯುತ್ತಿದೆ ಎಂದು ಇವರು ರಕ್ಷಣೆಯನ್ನು ಕೊಟ್ಟುಕೊಂಡು ಕಾರ್ಪೊರೇಷನ್ ಹಣ ಲೂಟಿಯಾಗುತ್ತಿದೆ. ಕೋರ್ಟಿನಿಂದ ತೀರ್ಪು ಬರುವುದು ಯಾವಾಗ ಎಂದು ಯಾರಿಗೂ ಗೊತ್ತಿಲ್ಲ. ಅಲ್ಲಿಯತನಕ ಸುಮ್ಮನಿದ್ದರೆ ಶಿವಮೊಗ್ಗ ನಗರಸಭೆಯಲ್ಲಿ ಒಂದು ಗುಂಡುಪಿನ್ನು ಉಳಿಯುವುದಿಲ್ಲ. ಇಡೀ ಶಿವಮೊಗ್ಗ-ಭದ್ರಾವತಿ ಕಾರ್ಪೊರೇಷನ್ ಹಣ ಲೂಟಿ ಆಗದ ಹಾಗೆ ಏನು ಮಾಡುತ್ತೀರಾ? ಎಂದು ನಾನು ಸರ್ಕಾರಕ್ಕೆ ಕೇಳುವುದಕ್ಕೆ ಇಷ್ಟಪಡುತ್ತೇನೆ. ನೀವು ಸುಮ್ಮನೆ ಕುಳಿತುಕೊಂಡರೆ ಅವರಿಗೆ ರಕ್ಷಣೆಯನ್ನು ಕೊಟ್ಟಹಾಗೆ ಆಗುತ್ತದೆ. ಭ್ರಷ್ಟಾಚಾರಕ್ಕೆ ನೀವು ರಕ್ಷಣೆ ಕೊಟ್ಟ ಹಾಗೆ ಆಗುತ್ತದೆ. ಚುನಾವಣೆಯನ್ನು ನಡೆಸಬೇಡಿ, ಇದನ್ನು ವಜಾ ಮಾಡಿ, ಅಡ್ಮಿನಿಸ್ಟ್ರೇಟರನ್ನು ಬೇಗ ಹಾಕಿ, ನಂತರ ಚುನಾವಣೆಯನ್ನು ಮಾಡಿ, ಇಲ್ಲದಿದ್ದರೆ ಪ್ರತಿದಿನ ಹಣ ಲೂಟಿಯಾಗುತ್ತದೆ, ಶಿವಮೊಗ್ಗ ಭದ್ರಾವತಿಯ ಆಸ್ತಿ ಒಂದು ಪೈಸಾ ಉಳಿಯುವುದಿಲ್ಲ. ಯಾವುದೇ ಬಿಲ್ಡಿಂಗ್ ಉಳಿಯುವುದಿಲ್ಲ, ಯಾವುದೇ ಸೈಟ್ ಉಳಿಯುವುದಿಲ್ಲ, ಆ ಆಸ್ತಿಯನ್ನು ಲೂಟಿ ಮಾಡುವುದಕ್ಕೆ ನೀವು ಕಾರಣರಾಗುತ್ತೀರಿ. ಈ ಸರ್ಕಾರ ಅದನ್ನು ವಜಾ ಮಾಡಲೇಬೇಕು, ನಾನು ಸರ್ಕಾರದ ಈ ಧೋರಣೆಯನ್ನು ಪ್ರತಿಭಟನೆ ಮಾಡುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಹಕ್ಕುಚ್ಯುತಿಯ ಬಗ್ಗೆ ನಿರ್ಣಯ ತೆಗೆದುಕೊಳ್ಳುವುದು ನಿಮಗೇ ಬಿಟ್ಟದ್ದು. ಇವತ್ತು ಹಕ್ಕುಚ್ಯುತಿ ಸ್ಪಷ್ಟವಾಗಿ ಆಗಿದೆ, ಶಾಸಕರು ಕಾಯಿದೆಯ ಬದ್ಧವಾಗಿ ಅವರು ತಮ್ಮ ಕರ್ತವ್ಯವನ್ನು ಮಾಡುವಾಗ ಅಲ್ಲಿ ಒಂದು ನಿರ್ಣಯ ಆಗಿದೆ; ಹಕ್ಕುಚ್ಯುತಿಯಾಗಿ ತಾವು ನಿರ್ಣಯ ಮಾಡಿ. ಆದರೆ ಮಾನ್ಯ ಸಚಿವರು ಕಾರಿನ ವ್ಯವಹಾರದ ಬಗ್ಗೆ ಹೇಳಿದರು. ಅಲ್ಲಿ ಮತ್ತೊಂದು ವ್ಯವಹಾರದ ಬಗ್ಗೆ ಹೇಳಿದರು. ಅಲ್ಲಿ ಮತ್ತೊಂದು ವ್ಯವಹಾರ ನಡೆಯುತ್ತಿದೆ ಎಂದು ಹೇಳಿದ್ದೀರಿ, ಇಷ್ಟೆಲ್ಲ ವ್ಯವಹಾರಗಳು ನಡೆಯುವುದು ನಿಮಗೆ ಗೊತ್ತಾದಾಗ ಅದನ್ನು ಪರಿಶೀಲನೆ ಮಾಡುವುದಕ್ಕೆ ನಿಮಗೆ ಏನು ಕಷ್ಟ?

ಅದು ನಾಮಿನೇಟ್ ಬಾಡಿಯಾಗಿದೆ, ಆ ಬಾಡಿಯನ್ನು ವಿತ್‌ಡ್ರಾ ಮಾಡುವುದಕ್ಕೆ ನಿಮಗೆ ಏನು ಕಷ್ಟವಿದೆ. ಹಕ್ಕುಚ್ಯುತಿಯ ಬಗ್ಗೆ ಅಧ್ಯಕ್ಷರಿಗೆ ಬಿಟ್ಟಿದ್ದು, ತಾವೇ ನಿರ್ಣಯವನ್ನು ತೆಗೆದುಕೊಳ್ಳಿ. ಇವತ್ತು ಮಾನ್ಯ ಸಚಿವರು ನಾನು ಶಿವಮೊಗ್ಗಕ್ಕೆ ಹೋಗಿದ್ದೆ, ಅಲ್ಲಿ ದುರ್ವ್ಯವಹಾರವಾಗಿರುವುದು ನನಗೆ ಕಂಡುಬಂದಿದೆ ಎಂದು ಹೇಳಿದ್ದಾರೆ. ಕಮಿಷನರ್ ನನಗೆ ಹೇಳಿದ್ದಾರೆಂದು ಹೇಳುತ್ತಾರೆ. ಕಾರ್ ವ್ಯವಹಾರದ ಬಗ್ಗೆಯೂ ಹೇಳಿದ್ದಾರೆ. ಹೀಗೆ ಎಲ್ಲಾ ಗೊತ್ತಿದ್ದಾಗ ಅದನ್ನು ಸೂಪರ್‌ಸೀಡ್ ಮಾಡಲಿಕ್ಕೆ ಏನು ತೊಂದರೆ? ಈ ಬಗ್ಗೆ ನಿಮ್ಮ ಚಿಂತನೆ ಏನು ಅಂದರೆ, ನಮ್ಮ ಪಕ್ಷದವರು ನಮ್ಮ ಪಕ್ಷದ ಸದಸ್ಯರು ಅಂತ ಇರಬಹುದು. ಆ ಚಿಂತನೆ ಇರಬಾರದು; ನೀವು ದಕ್ಷ, ಒಳ್ಳೆ ಪ್ರಾಮಾಣಿಕ ಆಡಳಿತವನ್ನು ಕೊಡುತ್ತೇವೆಂದು ಏನು ಹೇಳಿದ್ದೀರಿ, ಆ ಗುರಿಯನ್ನು ನೀವು ಮುಟ್ಟಬೇಕಾದರೆ ನಾಮಿನೇಶನ್‌ನ್ನು ವಿತ್‌ಡ್ರಾ ಮಾಡಿ; ಸೂಪರ್‌ಸೀಡ್ ಮಾಡುವ ಪ್ರಶ್ನೆ ಇಲ್ಲ. You need not supersede. You have to withdraw the nominations because they are nominated people. ಹಾಗಾಗಿ ಅಲ್ಲಿ ಸೂಪರ್‌ಸೀಡ್ ಮಾಡುವ ಪ್ರಶ್ನೆ ಇಲ್ಲ. ವಿತ್‌ಡ್ರಾ ಮಾಡಿ, ಬೇರೆ ಜನ ಬೇಕಾದರೆ ಹಾಕಿ. ನಿಮ್ಮ ಜನರನ್ನೇ ಹಾಕಿ, I have no objection. They are nominated people. ನಾನು ನಿಮಗೆ ಸಲಹೆ ಕೊಡುತ್ತಿದ್ದೇನೆ, ಅವರು ನಾಮಿನೇಟೆಡ್ ಆಗಿರುವುದರಿಂದ ಒಂದು ಕ್ಷಣದಲ್ಲಿ ನೀವು ನಾಮಿನೇಷನ್ ವಿತ್‌ಡ್ರಾ ಮಾಡಬಹುದು, ನಾಮಿನೇಷನ್ ವಿತ್‌ಡ್ರಾ ಮಾಡಿ ಚುನಾವಣೆ ಮಾಡಿ. Let us go to polls. ಚುನಾವಣೆ ಮಾಡುವುದಕ್ಕೆ ಬಹಳ ಕಷ್ಟ ಇದ್ದರೆ ಅಡ್ಮಿನಿಸ್ಟ್ರೇಟರ್ ಹಾಕಿ. ಆದರೆ ಇಂತಹ ಕಳ್ಳರೊಂದಿಗೆ ನೀವು ಆಡಳಿತ ನಡೆಸಿದರೆ ನಿಮಗೆ ಗೌರವ ಬರುವುದಿಲ್ಲ. ಅಲ್ಲಿ ಬಹಳ ದುರ್ವ್ಯವಹಾರ ನಡೆದಿದೆ, ತಮ್ಮ ಗಮನಕ್ಕೆ ಬಂದಿರಬಹುದು, ಜಮೀನಿನ ಅವ್ಯವಹಾರ ಬಹಳ ನಡೆದಿದೆ. ಆದುದರಿಂದ ಅದರ ಬಗ್ಗೆ ಸೂಕ್ತಕ್ರಮವನ್ನು ತಾವು ತೆಗೆದುಕೊಳ್ಳಬೇಕು. ತಾವು ಇದನ್ನು ಹಗುರವಾಗಿ ತೆಗೆದುಕೊಳ್ಳಬಾರದು ಮತ್ತು ನೀವು ಭಯಪಡುವ ಕಾರಣವಿಲ್ಲ. ಅದು ಬಂಗಾರಪ್ಪನವರ ಪ್ರದೇಶ, ಅವರು ಮಾಜಿ ಮುಖ್ಯಮಂತ್ರಿ ಎನ್ನುವ ಭಯ ಪಡುವ ಕಾರಣವಿಲ್ಲ. ನೀವು ನೇರವಾಗಿ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಅದಕ್ಕೋಸ್ಕರ ನಾಮಿನೇಷನ್ ವಿತ್‌ಡ್ರಾ ಮಾಡಿ ಸೂಕ್ತವಾದ ತನಿಖೆ ಮಾಡಿ ಎಂದು ತಮಗೆ ಒತ್ತಾಯಿಸುತ್ತೇನೆ.

ಶ್ರೀ ಸಿ. ಭೈರೇಗೌಡ : ಮಾನ್ಯ ಅಧ್ಯಕ್ಷರೇ, ಅನೇಕ ಜನ ಮಾನ್ಯ ಸದಸ್ಯರು ಹೇಳಿದ್ದಾರೆ, ಏನೆಂದರೆ ಅದು ಯಾವತ್ತೋ ರದ್ದಾಗಬೇಕಾಗಿತ್ತು ಎಂದು, ಮಾನ್ಯ ಮಂತ್ರಿಗಳು ಮೇಯರ್ ಉಪಯೋಗಿಸುತ್ತಿದ್ದ ಕಾರು ನುಚ್ಚು ನೂರಾಗಿದೆ ಎಂದು ಹೇಳಿದ್ದಾರೆ. ಅದೂ ಅಲ್ಲದೆ ಅವರು ಚುನಾಯಿತರಾಗಿದ್ದಿದ್ದರೆ, ಅದು ಪ್ರಜಾಪ್ರಭುತ್ವ ರೀತಿಯಲ್ಲಿ ಚುನಾಯಿತರಾಗಿ ಬಂದಿರುವವ ಸಂಸ್ಥೆ ಎಂದು ಹೇಳಬಹುದಾಗಿತ್ತು. ಆದರೆ ಅಲ್ಲಿ ಪ್ರಜಾಪ್ರಭುತ್ವಕ್ಕೆ ಅಪಚಾರವಾಗಿದೆ, ಮೇಯರ್ ಚುನಾಯಿತರಾಗಿರುವವರಲ್ಲ, ಅವರೂ ಸಹಾ ಸರ್ಕಾರದ ಕೃಪಾಕಟಾಕ್ಷದಲ್ಲಿರುವವರು; ಸರ್ಕಾರದಿಂದ ನೇಮಕ ಮಾಡಿರುವವರು. ನೇಮಕವಾಗಿರುವವರು ಇಷ್ಟು ಅವ್ಯವಹಾರದಲ್ಲಿ ತೊಡಗಿದ್ದರೆ ಅದನ್ನು ರದ್ದು ಮಾಡಲು ಇಷ್ಟು ಮಿನಾವೇಷ ಎಣಿಸುತ್ತಿದ್ದರೆ ನಾವು ಏನಂತ ಕರೆಯಬೇಕು. ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಾರೆ Rule of law will

prevail ಎಂದ What is the Rule of law? Has not that car been smashed ? ಕಾರು ನುಚ್ಚುನೂರಾಗಿದೆ ; Where is your rule of law? ಹಾಗಾದರೆ ಯಾವುದು ರೂಲ್, ನಿಮ್ಮ ಪಕ್ಷದವರಾದರೆ ಒಂದು ರೂಲ್, ಬೇರೆಯವರಾದರೆ ಇನ್ನೊಂದು ರೂಲಾ? ಹೀಗೆ ಹೇಳಲು ನಿಮಗೆ ಏನು ನೈತಿಕ ಆಧಾರವಿದೆ? Rule of law will prevail ಎನ್ನುವುದಕ್ಕೆ ಎಲ್ಲಿ ಆಧಾರ ಇದೆ? ಬಾಯಿ ಮಾತಿನಲ್ಲಿ ಹೇಳುವುದಲ್ಲ, ಅದನ್ನು ಕಾರ್ಯರೂಪಕ್ಕೆ ತರುವ ಅವಶ್ಯಕತೆ ಇದೆ. ಅದನ್ನು ದಯವಿಟ್ಟು ಇವತ್ತಿನ ದಿವಸ ಮಾಡಿ. ಹಕ್ಕುಚ್ಯುತಿ ನಿರ್ಣಯದ ಬಗ್ಗೆ ತೀರ್ಮಾನ ಮಾಡುವುದು ಅಧ್ಯಕ್ಷರಿಗೆ ಬಿಟ್ಟಿದ್ದು. ಅಧ್ಯಕ್ಷರು ಅದರ ಬಗ್ಗೆ ನಿರ್ಣಯ ತೆಗೆದುಕೊಳ್ಳುತ್ತಾರೆ. ಸರ್ಕಾರ ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು ; ತಪ್ಪು ಯಾರೇ ಮಾಡಿರಲಿ, ಯಾವ ಪಕ್ಷದವರೇ ಮಾಡಿರಲಿ, ಅವರ ಮೇಲೆ ಕ್ರಮ ತೆಗೆದುಕೊಂಡು ನೀವು ಹೇಳುವ Rule of law, Let the Rule of law prevail. ಅಲ್ಲಿಯವರಗೆ ನಮ್ಮ ಸ್ನೇಹಿತರು ಮಾಡುತ್ತಿರುವ ಧರಣದಲ್ಲಿ ನಾವೂ ಸಹ ಭಾಗವಹಿಸಬೇಕಾಗುತ್ತದೆ.

*ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಉಪಾಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಶಿವಮೊಗ್ಗ ಭಾಗದ ಸನ್ಮಾನ್ಯ ಸದಸ್ಯರು, ಸನ್ಮಾನ್ಯ ವಾಟಾಳ್ ನಾಗರಾಜ್‌ರವರು ಈ ವಿಚಾರವನ್ನು ಎತ್ತಿದ್ದಾರೆ. ಮುಖ್ಯವಾಗಿ ಹಕ್ಕುಚ್ಯುತಿ ನಿರ್ಣಯದಲ್ಲಿ ಎರಡು ಭಾಗ ಇದೆ ಎಂದು ನಾನು ಹೇಳಿದ್ದೇನೆ. ಒಂದು ಭಾಗ ಹಕ್ಕುಚ್ಯುತಿ ಆಗಿದೆಯೇ ಇಲ್ಲವೆ ಎನ್ನುವುದನ್ನು ಹಕ್ಕುಚ್ಯುತಿ ಸಮಿತಿಗೆ ಕಳುಹಿಸತಕ್ಕದ್ದು ಮತ್ತು ಇನ್ನೊಂದು ಸ್ಥಳದಲ್ಲೇ ನಿರ್ಣಯ ತೆಗೆದುಕೊಳ್ಳುವುದು. ಅದು ಸನ್ಮಾನ್ಯ ಉಪಾಧ್ಯಕ್ಷರು ಅಥವಾ ಸಭಾಧ್ಯಕ್ಷರಿಗೆ ಬಿಟ್ಟಿದ್ದು. ಎರಡನೆಯದು ಅದರ ಜೊತೆಯಲ್ಲಿ ಕಾರ್ಪೊರೇಷನ್‌ರವರು ಸನ್ಮಾನ್ಯ ಪರಸ್ಪರ ಮೇಲೆ ಮಾಡಿದ್ದಾರೆ. ಅದನ್ನು ಹಕ್ಕುಚ್ಯುತಿ ಭಾಗವಾಗಿ ತಾವು ಪರಿವರ್ತನೆ ಮಾಡಿದ್ದೀರ. ಅಂತಹ ನಿರ್ಣಯ ತೆಗೆದುಕೊಳ್ಳಲು ಕಾನೂನಿನ ಪ್ರಕಾರ ಒಂದು ಹಕ್ಕು ಇದೆ. ಇಂತಹ ಸೀಮಿತವಾದಂತಹ ವಿಚಾರದಲ್ಲಿ ನಿರ್ಣಯ ಮಾಡಬೇಕಾಗುತ್ತದೆ. ಆದುದರಿಂದ ಕಾನೂನಿನ ಪರಿಧಿಯಲ್ಲಿ ಇಲ್ಲದೆ ಇರುವುದನ್ನು ನಿರ್ಣಯ ಮಾಡಿದರೆ that is not sustainable under law. I think, ಮುನಿಸಿಪಲ್ ಆಕ್ಟ್ ಪ್ರಕಾರ ಅದನ್ನು ರದ್ದು ಮಾಡುವ ಅಧಿಕಾರ ಕೂಡ ಇದೆ. We can definitely get it cancelled. That is one point. ಇನ್ನು ದುರುಪಯೋಗ, ಅವ್ಯವಹಾರದ ಬಗ್ಗೆ ತಾವು ಪ್ರಸ್ತಾಪ ಮಾಡಿದ್ದೀರಿ. ಆದರೆ ವರದಿಯನ್ನು ನಾವು ತರಿಸಿದ್ದೇವೆ. We have got the full report. We are contemplating what action should be taken. ಇದರ ವಿಚಾರ ಕೋರ್ಟಿನಲ್ಲೂ ಇದೆ. ಸನ್ಮಾನ್ಯ ಭೈರೇಗೌಡರು ರೂಲ್ ಆಫ್ ಲಾ ಬಗ್ಗೆ ಹೇಳಿದರು. ಅದು ಎಲ್ಲರಿಗೂ ಅನ್ವಯವಾಗುತ್ತದೆ. Yes. That is our slogan. That is the slogan which we are going to practice so far as we are here in this position. ಆದ್ದರಿಂದ ಆ ದೃಷ್ಟಿಯಲ್ಲಿ ರೂಲ್ ಆಫ್ ಲಾ ಎಂದು ಮಾಡಿಕೊಳ್ಳುವಾಗ, ಕೂಡ ಅದರಲ್ಲಿ ಯಾವುದೇ ರೀತಿಯ ತ್ರಿಜ್ಯೂಡೀಸ್ ಅದರ ಪೊರೆ ಇರಬಾರದು. ಇದು ಯಾವುದೋ ಹಿನ್ನೆಲೆಯಲ್ಲಿ ಯಾವುದೇ ಉದ್ದೇಶದಿಂದ ಒಂದು ಪಕ್ಷದ ದೃಷ್ಟಿಯಿಂದ ಮಾಡಿದ್ದೇವೆ

ಎನ್ನತಕ್ಕ ಸಂಶಯ ಸಾರ್ವಜನಿಕರಿಗೆ ಬರಬಾರದು. ನಾವು ನಿರ್ಣಯ ಏನು ತೆಗೆದುಕೊಳ್ಳುತ್ತೇವೆ ಅದು ಸಾರ್ವಜನಿಕ ದೃಷ್ಟಿಯಲ್ಲಿ ಸರಿಯಾದಂಥ ನಿರ್ಣಯ ಅಬ್‌ಜೆಕ್ಟೀವ್ ನಿರ್ಣಯ ಆಗಿರಬೇಕು. ಬರೀ ಮಾಡುವುದು ಅಷ್ಟೇ ಅಲ್ಲ, ಅದನ್ನು ಮಾಡಿ ತೋರಿಸುವುದು ಅಗತ್ಯ. - ಸರ್ಕಾರ ಬರೀ ಮೆರಿಟ್ ಮೇಲೆ ನಿರ್ಣಯ ತೆಗೆದುಕೊಂಡರೂ, ಅದನ್ನು ಸಾರ್ವಜನಿಕರು ತಪ್ಪು ದೃಷ್ಟಿಯಿಂದ, ತಪ್ಪು ಉದ್ದೇಶದಿಂದ ಅಥವಾ ಸಂಶಯಾತ್ಮಕವಾಗಿ ನೋಡಿದರೆ ಸರಿಯಾದಂಥ ನಿರ್ಣಯವೂ ಕೂಡ ಕೆಲವು ಸಾರಿ ವಿವಾದಾತ್ಮಕ ನಿರ್ಣಯವಾಗುತ್ತದೆ. ಆ ರೀತಿ ಆಗಿ ಕೋರ್ಟಿಗೆ ಹೋದಂಥ ಪ್ರಕರಣಗಳೂ ಸಹ ಇವೆ. ಇದರ ಬಗ್ಗೆ ಹಿರಿಯ ಸದಸ್ಯರೆಲ್ಲರೂ ಇದ್ದೀರಿ you want me to announce the decision now. ಈಗ ಅನೌನ್ಸ್ ಮಾಡಿದೆ ಎಂದು ಇಟ್ಟುಕೊಳ್ಳಿ. You are helping them, suppose the nomination of the Mayor and members deserves to be cancelled. ಅವರು ನಿಜವಾಗಿ ಅವ್ಯವಹಾರ ಮಾಡಿದ್ದಾರೆ ಎಂದು we have not come to that conclusion. ನಾವು ಏನಾದರೂ ಇವೊತ್ತು ರಿವ್ಯೂ ಮಾಡಿದ್ದೇವೆ ಎಂದು ಹೇಳಿದರೆ, you are definitely giving a handle to them to go to the court and see that in view of the pressure on behalf of the BJP members from Shimoga, the Government has acted in superseding it. I think, if you are interested in that, it is OK. If you really want any order on merit, on objectivity to be sustained, I think, better you hear me, go back to your seats. It is left to you. ಯಾವಾಗಲೂ ಇಂಥ ನಿರ್ಣಯಗಳನ್ನು ನಾವು ಸದನದಲ್ಲಿ ಪ್ರೆಷರೈಸ್ ಮಾಡಿ ಮಾಡಿದರೆ, that itself will become a cause of action to act aside the order whatever the government has done even if it is done absolutely perfectly in accordance with law. we are not here to protect anyone. ಏನಾದರೂ ಅವ್ಯವಹಾರ ಮಾಡಿದ್ದು ಸಾಬೀತಾದರೆ, on record, objectively taking a decision, government will not hesitate even for a minute. definitely the Minister is seized of the matter. The Department is seized of the matter. We may take a decision this side or that side any minute, even to-day or tomorrow. we will not hesitate. ಹಾಗೂ ಅನೇಕ ಕಡೆ ಹೇಳಿದ್ದೇವೆ. I don't believe for tomorrow. I believe for to-day. I will take it to-day itself. That is the philosophy with which we are working in a government. ತಾವು ಗೌರವಾನ್ವಿತ ಹಿರಿಯ ಸದಸ್ಯರುಗಳು ಈ ವಿಚಾರವನ್ನು ಎತ್ತಿದ್ದೀರಿ ಎಂದು ನಾವು ಪ್ರತಿಷ್ಠೆ ಮಾಡಿಕೊಳ್ಳತಕ್ಕದ್ದು ಏನೂ ಇಲ್ಲ. ಇದರಲ್ಲಿ ಸರ್ಕಾರದ ಅಥವಾ ನಮ್ಮ ಪಕ್ಷದ ಪ್ರತಿಷ್ಠೆ ಏನೂ ಇಲ್ಲ. ಪಕ್ಷಕ್ಕೆ ವರ್ಚಸ್ಸು ಬೇಕು, ಪಕ್ಷದ ವರ್ಚಸ್ಸನ್ನೂ ಕಳೆದುಕೊಳ್ಳಲು ನಾವು ಸಿದ್ಧರಿಲ್ಲ. ಪಕ್ಷದ ವರ್ಚಸ್ಸನ್ನು ಯಾವುದೇ ರೀತಿಯಿಂದ ಇದು ಕೊಡುವುದು ಇದ್ದರೆ, We are first

to respond to any demand which is made from whichever qurter it comes.

ಶ್ರೀ ಆರ್. ವಿ. ದೇಶಪಾಂಡೆ : ಸನ್ಮಾನ್ಯ ಮುಖ್ಯಮಂತ್ರಿಗಳು ರಿಪೋರ್ಟ್ ಬಂದಿದೆ ಎಂದು ಹೇಳಿದರು. ಸಚಿವರು ಏನು ಹೇಳಿದರು ಎಂದರೆ ಮಿಸ್‌ಯೂಸ್ ಆಗಿದೆ ಹಾಗೂ ಎನ್‌ಕ್ವೈರಿಗೆ ಆರ್ಡರ್ ಮಾಡಿದ್ದೇವೆ ಎಂದು. ನಿಮ್ಮ ಹತ್ತಿರ ರಿಪೋರ್ಟ್ ಬಂದಿದ್ದರೆ ಕ್ರಮ ತೆಗೆದುಕೊಳ್ಳಲು ನಿಮಗೆ ಏನು ಭಯ? ನಾವೇನೂ ಇಲ್ಲಿ ರಾಜಕೀಯ ಮಾಡಲು ಹೊರಟಿಲ್ಲ. ನಿಮಗೆ ಭಯ ಇರಬಹುದು, ತಮ್ಮ ಪಕ್ಷದವರು ಅಲ್ಲಿ ನಾಮಿನೇಟ್ ಮೆಂಬರ್ಸ್ ಇದ್ದಾರೆ ಎಂದು. ಇವೊತ್ತು ಅವರು ಕೋರ್ಟಿಗೆ ಹೋಗುತ್ತಾರೆ ಎಂದು ಹೆದರಿಕೊಳ್ಳುವ ಕಾರಣ ಇಲ್ಲ. ಕೋರ್ಟಿಗೆ ಹೋಗಲಿ. ಕೇವಲ ಬಿ.ಜೆ.ಪಿ. ಸದಸ್ಯರು ಡಿಮ್ಯಾಂಡ್ ಮಾಡಿದ್ದಾರೆ ಎಂದಲ್ಲ, ಇಡೀ ವಿರೋಧಪಕ್ಷದ ಸದಸ್ಯರು ಡಿಮ್ಯಾಂಡ್ ಮಾಡಿದ್ದೇವೆ. ಇಲ್ಲಿ ಅಕ್ರಮ ನಡೆದಿದೆ; ಆ ಕಾರ್ಪೊರೇಷನ್‌ನಲ್ಲಿ ಜನಹಿತ ಕೆಲಸಕಾರ್ಯಗಳು ಆಗುತ್ತಾ ಇಲ್ಲ. ಅಲ್ಲಿ ಅವ್ಯವಹಾರ ನಡೆಯುತ್ತಿದೆ ಹಾಗೂ ಕರಪ್ಷನ್ ನಡೆದಿದೆ ಎಂದು ಹೇಳಿದ್ದೇವೆ. ಮಂತ್ರಿಗಳೂ ಒಪ್ಪಿಕೊಂಡಿದ್ದಾರೆ. ಅಲ್ಲಿ ಆಗಿರುವ ದುರ್ವ್ಯವಹಾರ ಹಾಗೂ ಅಕ್ರಮಗಳ ಬಗ್ಗೆ ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ ಸದನ ಇವೊತ್ತು ಮುಗಿಯುತ್ತದೋ ಇಲ್ಲವೋ ಗೊತ್ತಿಲ್ಲ. ಆದರೆ ಬಹಳಷ್ಟು ಕಾರ್ಯಕಲಾಪಗಳು ಇವೆ. ಸದನದ ಕಾರ್ಯಕಲಾಪಗಳಿಗೆ ಅಡ್ಡಿ ಮಾಡುವ ಇಚ್ಛೆ ನಮಗಿಲ್ಲ. ಮುಖ್ಯಮಂತಿಗಳು ದಕ್ಷ, ಸ್ವೆಚ್ಛ ಸರ್ಕಾರ ಕೊಡುತ್ತೇವೆ ಎಂದೆಲ್ಲಾ ಹೇಳುತ್ತಾರೆ. ಒಬ್ಬ ಆಫೀಸರನ್ನು ಸಸ್ಪೆಂಡ್ ಮಾಡಿದರೆ ಅದೇ ಒಂದು ಕಾರಣವಾಗುತ್ತದೆ ಎಂದು ಹೇಳುತ್ತಾರೆ. ಆದರೆ ತಪ್ಪಾಗಿದೆ ಎಂದು ಸರ್ಕಾರಕ್ಕೆ ಮನವರಿಕೆ ಆದರೆ ಏತಕ್ಕೆ ಕ್ರಮ ಕೈಗೊಳ್ಳಬಾರದೇಕೆ? ತಕ್ಷಣ ಅವರ ನಿರ್ಣಯ ತೆಗೆದುಕೊಳ್ಳಲು ಸರ್ಕಾರಕ್ಕೆ ಶಕ್ತಿ ಇರಬೇಕು. ನಮ್ಮ ಸದಸ್ಯ ಮಿತ್ರರುಗಳಿಗೆ ವಿನಂತಿ ಮಾಡಿಕೊಳ್ಳುತ್ತೇನೆ, ಧರಣಿ ಮಾಡುವುದರಿಂದ ಸದನದ ಕಾರ್ಯಕಲಾಪಗಳಿಗೆ ಅಡ್ಡಿ ಆಗಬಹುದು; ಇಲ್ಲಿ ಹಲವಾರು ವಿಷಯಗಳು ಇವೆ, ರೈತರ ವಿಷಯ ಇದೆ, ಭಟ್ಕಳ್ ವಿಷಯ ಇದೆ ಹಾಗೂ ಆಶ್ರಯ ವಿಷಯ ಇದೆ. ಆದ್ದರಿಂದ ನಾನು ಹೇಳುತ್ತಿರುವುದೇನೆಂದರೆ ಮುಖ್ಯಮಂತ್ರಿಗಳ ಉತ್ತರದಿಂದ ನಮಗೆ ಸಮಾಧಾನ ಆಗಿಲ್ಲ. ಏನು ನಾಮಿನೇಷನ್ ಮಾಡಿದ್ದೀರಿ ಅದನ್ನು ತಕ್ಷಣ ವಿತ್‌ಡ್ರಾ ಮಾಡಬೇಕು. ಅಲ್ಲಿ ಆಗಿರತಕ್ಕ ದುರ್ವ್ಯವಹಾರಗಳ ಬಗ್ಗೆ ಸಂಪೂರ್ಣವಾಗಿ ತನಿಖೆಯನ್ನು ಮಾಡಬೇಕೆಂದು ವಿರೋಧಪಕ್ಷದವರಾದ ನಾವೆಲ್ಲರೂ ಮನವಿ ಮಾಡಿಕೊಂಡಿದ್ದರೂ ಸಹ ಮುಖ್ಯಮಂತ್ರಿಗಳು ಅದಕ್ಕೆ ಗೌರವ ಕೊಡುತ್ತಾ ಇಲ್ಲ. ಆದ್ದರಿಂದ ಈ ಧೋರಣೆಯನ್ನು ಪ್ರೊಟೆಸ್ಟ್ ಮಾಡಿ ನಾವು ವಾಕ್‌ಔಟ್ ಮಾಡುತ್ತೇವೆ. ನಮ್ಮ ಸ್ನೇಹಿತರೂ ಕೂಡ ವಾಕ್‌ಔಟ್ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) : ನೀವು ಸಹ ಮಂತ್ರಿಗಳಾಗಿದ್ದಂಥವರು. ಏನಾದರೂ ಕ್ರಮ ತೆಗೆದುಕೊಳ್ಳಲಿಕ್ಕೆ ಪ್ರೊಸೀಜರ್ ಇರುವುದಿಲ್ಲವೇ? ಪ್ರತಿದಿನ ಹೀಗೆ ಪ್ರತಿಭಟನೆ ಮಾಡಿಕೊಂಡು ಹೋದರೆ ಹೇಗೆ?

(ಈ ಹಂತದಲ್ಲಿ ವಿರೋಧ ಪಕ್ಷದ ನಾಯಕರು ಮತ್ತು ಇತರ ಸದಸ್ಯರು ಸಭಾತ್ಯಾಗ ಮಾಡಿದರು.)

ಉಪಾಧ್ಯಕ್ಷರು : ಈಗ ಶಾಸನರಚನೆ ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು. ಕರ್ನಾಟಕ ನ್ಯಾಯವಾದಿಗಳ ಕಲ್ಯಾಣನಿಧಿ ತಿದ್ದುಪಡಿ ವಿಧೇಯಕ 1993.

1993ನೇ ಇಸವಿಯ ಕರ್ನಾಟಕ ನ್ಯಾಯವಾದಿಗಳ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕ :

(ಪರ್ಯಾಲೋಚನಾ ಪ್ರಸ್ತಾಪ)

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, ಕರ್ನಾಟಕ ನ್ಯಾಯವಾದಿಗಳ ಕಲ್ಯಾಣ ನಿಧಿ ತಿದ್ದುಪಡಿ ವಿಧೇಯಕ 1993ನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇವೆ.

(ಪ್ರಸ್ತಾವವನ್ನು ಮಂಡಿಸಲಾಯಿತು.)

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಉಪಾಧ್ಯಕ್ಷರೇ, the House is not is order. ನಾನು ವಿನಂತಿ ಮಾಡುತ್ತೇನೆ. ದಯಮಾಡಿ ಹೌಸ್ ಆರ್ಡರ್‌ನಲ್ಲಿ ಇರಲಿ. ಕೆಲಸ ಮಾಡುವುದು ಬಹಳ ಕಷ್ಟವಾಗುತ್ತದೆ. ಇದೇನು ಸಂತೆಯೇ?

ಉಪಾಧ್ಯಕ್ಷರು : ಮಾನ್ಯ ಗೌರವಾನ್ವಿತ ಸದಸ್ಯರುಗಳೆಲ್ಲಾ ಪದೇ ಪದೇ ವಿರೋಧ ಪಕ್ಷದವರ ಕಡೆಯಿಂದ ಈ ರೀತಿ ಕೇಳುವುದು ಅದು ಚೆನ್ನಾಗಿ ಕಾಣುವುದಿಲ್ಲ ಎನ್ನುವುದು ನನ್ನ ಭಾವನೆ. ದಯಮಾಡಿ ಮುಖ್ಯಮಂತ್ರಿಗಳು ಮತ್ತು ಸಂಬಂಧಪಟ್ಟಂಥ ಸಚಿವರು ಇಲ್ಲೇ ಇರುತ್ತಾರೆ. ದಯಮಾಡಿ ತಮ್ಮ ತಮ್ಮ ಆಸನಗಳಲ್ಲಿ ಹೋಗಿ ಕುಳಿತುಕೊಳ್ಳಬೇಕೆಂದು ವಿನಂತಿ.

ಶ್ರೀ ಸಿ. ಬೈರೇಗೌಡ : ಮಾನ್ಯ ಉಪಾಧ್ಯಕ್ಷರೇ, ಒಂದು ನಿಮಿಷ ದಯವಿಟ್ಟು ಕೇಳಿ.

(ಗೊಂದಲ)

ಉಪಾಧ್ಯಕ್ಷರು : ಮಾನ್ಯ ಬೈರೇಗೌಡರೇ, ನಾನು ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರನ್ನು ಕರೆದಿದ್ದೇನೆ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಸಿ. ಬೈರೇಗೌಡ : ಮಾನ್ಯ ಉಪಾಧ್ಯಕ್ಷರೇ, ಇದು .....
(ಗೊಂದಲ)